# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 344 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12-12-2018 |
| ಉತ್ತರಿಸುವವರು | : | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಬೆಳಗಾವಿ ವಿಭಾಗ ಹಾಗೂ ಕಲಬುರಗಿ ಕಂದಾಯ ವಿಭಾಗಗಳಲ್ಲಿ ಸ್ಥಾಪಿಸಿರುವ ಪ್ರಾದೇಶಿಕ ಮತ್ತು ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ವಿವರ ಹಾಗೂ ಅವುಗಳಿಗೆ ಕಳೆದ 02 ವರ್ಷದಲ್ಲಿ ಒದಗಿಸಿರುವ ಅನುದಾನ ಹಾಗೂ ವಿನಿಯೋಗಿಸಿದ ಅನುದಾನದ ಮಾಹಿತಿ ನೀಡುವುದು: | ಬೆಳಗಾವಿ ಮತ್ತು ಕಲಬುರಗಿ ಕಂದಾಯ ವಿಭಾಗಗಳಲ್ಲಿ ಸ್ಥಾಪನೆಯಾಗಿರುವ/ಸ್ಥಾಪನೆಗೊಳ್ಳುತ್ತಿರುವ ವಿಜ್ಞಾನ ಕೇಂದ್ರ ಮತ್ತು ಅವುಗಳ ವಸ್ತುಸ್ಥಿತಿಯ ವಿವರ ಕೆಳಕಂಡಂತಿದೆ: |

**ಅ) ಬೆಳಗಾವಿ ವಿಭಾಗ**

| ಕ್ರ. ಸಂ. | ವಿಜ್ಞಾನ ಕೇಂದ್ರ | ವಸ್ತುಸ್ಥಿತಿ |
|---|---|---|
| 1 | ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ | 2012 ರಿಂದ ಕಾರ್ಯ ನಿರ್ವಹಿಸುತ್ತಿದೆ |
| 2 | ಕಾರವಾರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2013 ರಿಂದ ಕಾರ್ಯ ನಿರ್ವಹಿಸುತ್ತಿದೆ |
| 3 | ಹಾವೇರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಕಾಮಗಾರಿ ಪ್ರಗತಿಯಲ್ಲಿದೆ |
| 4 | ಬಾಗಲಕೋಟೆ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಕಾಮಗಾರಿ ಪೂರ್ಣಗೊಂಡಿದ್ದು, ವಿಜ್ಞಾನ ಪ್ರದರ್ಶಿಕೆ/ಮಾದರಿಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 5 | ಗದಗ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಕಾಮಗಾರಿ ಪ್ರಾರಂಭಿಸಬೇಕಿದೆ |
| 6 | ವಿಜಯಪುರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ವಾಸ್ತುವಿನ್ಯಾಸ ತಯಾರಿಸಲಾಗಿದೆ |
| 7 | ಬೆಳಗಾವಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ವಾಸ್ತುವಿನ್ಯಾಸ ತಯಾರಿಸಬೇಕಾಗಿದೆ |
| 8 | ಚಿಕ್ಕೋಡಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಸೂಕ್ತ ಸ್ಥಳ ಗುರುತಿಸಲಾಗಿದೆ |

**ಆ) ಕಲಬುರಗಿ ವಿಭಾಗ**

| ಕ್ರ. ಸಂ. | ವಿಜ್ಞಾನ ಕೇಂದ್ರ | ವಸ್ತುಸ್ಥಿತಿ |
|---|---|---|
| 1 | ಬಳ್ಳಾರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2014 ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಉನ್ನತೀಕರಣ ಗೊಳಸಬೇಕಿದೆ |
| 2 | ಬೀದರ್ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | 2015 ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಉನ್ನತೀಕರಣ ಗೊಳಸಬೇಕಿದೆ |
| 3 | ರಾಯಚೂರು ಉಪ- | ಭಾಗಶಃ |

| | | |
|---|---|---|
| | ಪ್ರಾದೇಶಿಕ ವಿಜ್ಞಾನ ಕೇಂದ್ರ | ಅಭಿವೃದ್ಧಿಗೊಂಡು ಕಾರ್ಯ ನಿರ್ವಹಿಸುತ್ತಿದೆ |
| 4 | ಕೊಪ್ಪಳ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಕಾಮಗಾರಿ ಪೂರ್ಣಗೊಂಡಿದ್ದು, ವಿಜ್ಞಾನ ಪ್ರದರ್ಶಿಕೆ/ಮಾದರಿಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ |
| 5 | ಯಾದಗಿರಿ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ಸ್ಥಳ ಗುರುತಿಸಲಾಗಿದೆ |
| 6 | ಚಿತ್ತಾಪುರ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರ | ವಾಸ್ತುವಿನ್ಯಾಸ ತಯಾರಿಸಲಾಗಿದೆ |

ಸದರಿ ಕೇಂದ್ರಗಳಿಗೆ 2017-18 ಮತ್ತು 2018-19ನೇ ಸಾಲಿನಲ್ಲಿ ಒದಗಿಸಿರುವ ಅನುದಾನ ಹಾಗೂ ವಿನಿಯೋಗಿಸಿದ ಅನುದಾನದ ಮಾಹಿತಿ ಕೆಳಕಂಡಂತಿದೆ:

| ಕ್ರ. ಸಂ. | ವಿಜ್ಞಾನ ಕೇಂದ್ರ | 2017-18 ಮತ್ತು 2018-19ನೇ ಸಾಲಿನಲ್ಲಿ ಒದಗಿಸಲಾದ ಒಟ್ಟು ಅನುದಾನ (ರೂ. ಲಕ್ಷಗಳಲ್ಲಿ) | 2017-18 ಮತ್ತು 2018-19ನೇ ಸಾಲಿನಲ್ಲಿ ವಿನಿಯೋಗಿಸಲಾದ ಒಟ್ಟು ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| **ಬೆಳಗಾವಿ ವಿಭಾಗ** | | | |
| 1 | ಧಾರವಾಡ | 187.50 | 187.50 |
| 2 | ಕಾರವಾರ | 115.00 | 115.00 |
| 3 | ಹಾವೇರಿ | 42.85 | - |
| 4 | ಬಾಗಲಕೋಟೆ | 175.00 | 113.61 |
| 5 | ಗದಗ | - | - |
| 6 | ವಿಜಯಪುರ | 138.14 | 19.01 |
| 7 | ಬೆಳಗಾವಿ | 50.00 | - |
| 8 | ಚಿಕ್ಕೋಡಿ | 150.00 | - |
| **ಕಲಬುರಗಿ ವಿಭಾಗ** | | | |
| 1 | ಬಳ್ಳಾರಿ | 19.40 | 8.79 |
| 2 | ಬೀದರ್ | 25.00 | 12.864 |
| 3 | ರಾಯಚೂರು | 69.28 | 61.78 |
| 4 | ಕೊಪ್ಪಳ | 80.00 | - |
| 5 | ಯಾದಗಿರಿ | 60.00 | - |
| 6 | ಚಿತ್ತಾಪುರ | - | - |

| | |
|---|---|
| ಆ) ಈ ಎರಡೂ ಕಂದಾಯ ವಿಭಾಗಗಳಲ್ಲಿ ಸ್ಥಾಪಿಸಿರುವ, ಸ್ಥಾಪಿಸಲು ಇಚ್ಛಿಸಿರುವ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಪಾರ್ಕ್‌ಗಳ ವಿವರ ನೀಡುವುದು ಹಾಗೂ ಅವುಗಳಿಗೆ ಗುರುತಿಸಲಾಗಿರುವ ಜಮೀನಿನ ವಿವರ, ಒದಗಿಸಿದ ಅನುದಾನದ ವಿವರ, ವಿನಿಯೋಗಿಸಿದ ಅನುದಾನದ ವಿವರ ಒದಗಿಸುವುದು; | ಕಲಬುರಗಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಈಗಾಗಲೇ ಇಲಾಖೆಯ ಅಧೀನದಲ್ಲಿರುವ ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಕರ್ನಾಟಕ ಹೌಸಿಂಗ್ ಬೋರ್ಡ್‌ನಿಂದ ಖರೀದಿಸಿದ 1.72 ಎಕ್ಕರೆ ಜಮೀನಿನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ಅನ್ನು ಸ್ಥಾಪನೆ ಮಾಡಲಾಗಿದೆ. ಸದರಿ ಐಟಿ ಪಾರ್ಕ್ ಸ್ಥಾಪನೆಗೆ ಸರ್ಕಾರದಿಂದ ಯಾವುದೇ ಅನುದಾನವನ್ನು ಬಿಡುಗಡೆಗೊಳಿಸಿರುವುದಿಲ್ಲ.<br><br>ಬೆಳಗಾವಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಶದಲ್ಲಿದ್ದ ಸುಮಾರು 188086 ಚದರಡಿ ವಿಸ್ತೀರ್ಣದ ಕಟ್ಟಡವನ್ನು ದಿನಾಂಕ: 09.09.2005ರಂದು ರೂ. ಇಪ್ಪತ್ತ್ಮೂರು ಕೋಟಿ ವೆಚ್ಚದಲ್ಲಿ ಇಲಾಖೆಯು ಖರೀದಿ ಮಾಡಿ, ಸದರಿ ಕಟ್ಟಡದಲ್ಲಿ ಐಟಿ ಪಾರ್ಕ್ ಅನ್ನು ಸ್ಥಾಪನೆ ಮಾಡಲಾಗಿದೆ.<br><br>ಬೆಳಗಾವಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ವಾಘೇವಾಡೆ ಗ್ರಾಮದ ರಿ.ಸ.ನಂ: 152, ಪ್ಲಾಟ್ ನಂ: 1ರಲ್ಲಿ 169 ಎಕರೆ 32 ಗುಂಟೆ ಜಮೀನನ್ನು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯು ಐಟಿ ಪಾರ್ಕ್ ಸ್ಥಾಪಿಸಲು ಕೆಐಎಡಿಬಿ ಗೆ ಮಂಜೂರು ಮಾಡಲಾಗಿರುತ್ತದೆ. ಸದರಿ ಜಮೀನನ್ನು ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆ.ಐ.ಎ.ಡಿ.ಬಿ ರವರೊಂದಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ. |
| ಇ) ಐಟಿ ಪಾರ್ಕ್, ಬಿಟಿ ಪಾರ್ಕ್, ವಿಜ್ಞಾನ ಮತ್ತು ತಂತ್ರಜ್ಞಾನ ಪಾರ್ಕ್ ಸ್ಥಾಪನೆಗೆ ಬೇಡಿಕೆ ಬಂದಿರುವ ಬೇಡಿಕೆಗಳ ವಿವರ ಮತ್ತು ಆ ಬೇಡಿಕೆಗಳ ಈಡೇರಿಕೆಗೆ ಸರ್ಕಾರದ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಈ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳಲಾಗುವುದು? | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದಲ್ಲಿ ಪ್ರಸ್ತುತ ಐಟಿ ಪಾರ್ಕ್ ಮತ್ತು ಬಿಟಿ ಪಾರ್ಕ್ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆಗಳು ಸ್ವೀಕೃತಗೊಂಡಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಬೇಡಿಕೆಗಳು ಸ್ವೀಕೃತಗೊಂಡಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ವಿಯಇ 270 ವಿತ್ರಮ 2018

(ಕೆ.ಜೆ. ಜಾರ್ಜ್)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.